**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು):** ಮಾನ್ಯ ಅಧ್ಯಕ್ಷರೆ, front ನಲ್ಲಿ ಬಸ್‌ನಿಲ್ದಾಣ ಇದೆ, ಇದರ ಮಧ್ಯದಲ್ಲಿ ಡಿಪೋ ಹಾಗೂ ಇದರ ಹಿಂಭಾಗದಲ್ಲಿ ಖಾಲಿ ಜಾಗ ಇದೆ. ಹಿಂದೆ ಖಾಲಿ ಇರುವ ಜಾಗದಲ್ಲಿ ಹೊಸ ಡಿಪೋವನ್ನು ನಿರ್ಮಾಣ ಮಾಡುತ್ತೇವೆ, ಹಾಗೆಯೇ ಈಗ ಇರತಕ್ಕಂಥ ಬಸ್ ನಿಲ್ದಾಣ ಮತ್ತು ಡಿಪೋ ಎರಡನ್ನು ಸೇರಿಸಿ ದೊಡ್ಡದಾದ ಬಸ್ ನಿಲ್ದಾಣವನ್ನು ಮಾಡುತ್ತೇವೆ. ಇದಕ್ಕೆ ಕೊಟ್ಟಿರುವ 2.5 ಕೋಟಿ ರೂ.ಗಳ ಅನುದಾನ ಸಾಲುವುದಿಲ್ಲವೆಂದು ಹೇಳಿದ್ದಾರೆ. 2.5 ಕೋಟಿ ರೂಪಾಯಿಗಳು ಈ ವರ್ಷಕ್ಕೆ ಸೇರಿದೆ. ಮುಂದಿನ ವರ್ಷ ಇದಕ್ಕೆ ಇನ್ನೂ ಹೆಚ್ಚು ಹಣ ಕೊಟ್ಟು ಅಲ್ಲಿ ಒಳ್ಳೆಯ ಡಿಪೋ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

**ಅಧ್ಯಕ್ಷರು:** OK. ಸಾಕು ಬಿಡಿ.

## ನ್ಯಾಯಬೆಲೆ ಅಂಗಡಿಗಳಲ್ಲಿ ನಡೆಯುತ್ತಿರುವ ಅವ್ಯವಹಾರ

**272 (3650); ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್. (ಪುಲಕೇಶಿ ನಗರ)**

ಅ) ಅನ್ನಭಾಗ್ಯ ಯೋಜನೆಯಡಿಯಲ್ಲಿ ಉಚಿತವಾಗಿ ಅಕ್ಕಿ ವಿತರಿಸುತ್ತಿರುವ ನ್ಯಾಯಬೆಲೆ ಅಂಗಡಿಗಳಲ್ಲಿ ವ್ಯಾಪಕ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಪಡಿತರ ಅಂಗಡಿಗಳ ವಿರುದ್ಧ ಯಾವ ಕ್ರಮಕೈಗೊಂಡಿರುತ್ತಾರೆ;

ಇ) ಅನ್ನಭಾಗ್ಯ ಯೋಜನೆಯಡಿಯಲ್ಲಿ ಬಡವರಿಗಾಗಿ ನೀಡುತ್ತಿರುವ ಉಚಿತ ಅಕ್ಕಿಯನ್ನು ನ್ಯಾಯವಾದ ರೀತಿಯಲ್ಲಿ ವಿತರಿಸಲು ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿಗಳಿಗೆ ಸೂಚನೆ ನೀಡಲಾಗುವುದೆ?

**ಶ್ರೀ ದಿನೇಶ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು)**

ಅ) ಹೌದು.

ಆ) ಅನ್ನಭಾಗ್ಯ ಯೋಜನೆ ಜಾರಿಯಾದಾಗಿನಿಂದ ಅಂದರೆ ಜೂನ್ 2013 ರಿಂದ ಪಡಿತರ ಪದಾರ್ಥಗಳನ್ನು ಸಮರ್ಪಕವಾಗಿ ಪಡಿತರ ಚೀಟಿದಾರರಿಗೆ ವಿತರಿಸದ ನ್ಯಾಯಬೆಲೆ ಅಂಗಡಿ/ ಚಿಲ್ಲರೆ ಸೀಮೆಎಣ್ಣೆ ವಿತರಕರ ಮೇಲೆ ಕರ್ನಾಟಕ ಅಗತ್ಯ ವಸ್ತುಗಳ (ಸಾ.ವಿ.ಪ) ನಿಯಂತ್ರಣ ಆದೇಶ 1992ರಡಿಯಲ್ಲಿ ಕ್ರಮಕೈಗೊಳ್ಳಲಾಗುತ್ತಿದ್ದು, 220 ನ್ಯಾಯಬೆಲೆ ಅಂಗಡಿಗಳನ್ನು ಅಮಾನತ್ತು ಪಡಿಸಲಾಗಿರುತ್ತದೆ. 10 ನ್ಯಾಯಬೆಲೆ ಅಂಗಡಿಗಳನ್ನು ರದ್ದುಪಡಿಸಲಾಗಿರುತ್ತದೆ. 16 ನ್ಯಾಯಬೆಲೆ ಅಂಗಡಿಗಳಿಗೆ ಕಾರಣ ಕೇಳಿ ನೋಟೀಸುಗಳನ್ನು ನೀಡಲಾಗಿರುತ್ತದೆ. 8 ನ್ಯಾಯಬೆಲೆ ಅಂಗಡಿಗಳ ವಿರುದ್ಧ ಅಮಾನತ್ತಿಗೆ ಕ್ರಮಕೈಗೊಳ್ಳಲಾಗುತ್ತಿದೆ, 11 ನ್ಯಾಯಬೆಲೆ ಅಂಗಡಿಗಳ ಮೇಲೆ ಪ್ರಕರಣ ದಾಖಲಿಸಲಾಗಿರುತ್ತದೆ. ಒಂದು ನ್ಯಾಯಬೆಲೆ ಅಂಗಡಿಗೆ ದಂಡವಿಧಿಸಲಾಗಿರುತ್ತದೆ. 5 ನ್ಯಾಯಬೆಲೆ ಅಂಗಡಿಗಳಿಗೆ ಎಚ್ಚೆರಿಕೆ ನೀಡಲಾಗಿರುತ್ತದೆ. ಹಾಗೂ 7 ಪ್ರಕರಣಗಳು ವಿಚಾರಣೆ ಹಂತದಲ್ಲಿರುತ್ತವೆ.

ಇ) ಆಯಾ ನ್ಯಾಯಬೆಲೆ ಅಂಗಡಿಗಳಿಗೆ ಲಗತ್ತಾಗಿರುವ ಪಡಿತರ ಚೀಟಿ ಸಂಖ್ಯೆ, ಸದಸ್ಯರುಗಳ ಸಂಖ್ಯೆ, ಆ ಪಡಿತರ ಚೀಟಿಗೆ ನೀಡಬೇಕಾಗಿರುವ ಆಹಾರಧಾನ್ಯಗಳ ವಿತರಣಾ ಪ್ರಮಾಣ ಹಾಗೂ ದರಗಳನ್ನು ನಮೂದಿಸಿರುವ ಪಟ್ಟಿಗಳನ್ನು ನೀಡುತ್ತಿದ್ದು, ಅವುಗಳನ್ನು ಪಡಿತರ ಚೀಟಿದಾರರು ವೀಕ್ಷಿಸುವ ಸಲುವಾಗಿ ನ್ಯಾಯಬೆಲೆ ಅಂಗಡಿಗಳ ಮುಂದೆ ಪ್ರದರ್ಶಿಸಲು ನ್ಯಾಯಬೆಲೆ ಅಂಗಡಿಗಳವರಿಗೆ ಸೂಚನೆ ನೀಡಲಾಗಿರುತ್ತದೆ. ಹಾಗೂ ಕರ್ನಾಟಕ ಅಗತ್ಯ ವಸ್ತುಗಳ (ಸಾ.ವಿ.ಪ) ನಿಯಂತ್ರಣ ಆದೇಶ 1992ರಡಿಯಲ್ಲಿ ಕ್ರಮಕೈಗೊಳ್ಳಲು ಪ್ರಾಧಿಕರಣದಲ್ಲಿನ ಷರತ್ತು ಮತ್ತು ನಿಬಂಧನೆಗಳಲ್ಲಿ ತಿಳಿಸಲಾಗಿರುತ್ತದೆ. ಹಾಗೆಯೇ ಈ ಕೆಳಕಂಡಂತೆ ಸಹ ಕ್ರಮಕೈಗೊಳ್ಳಲಾಗಿರುತ್ತದೆ.

1) ನ್ಯಾಯಬೆಲೆ ಅಂಗಡಿ ಹಾಗೂ ಜಿಲ್ಲಾ ಮಟ್ಟದ ಜಾಗೃತಿ ಸಮಿತಿಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗಿದೆ. ರಾಜ್ಯದಲ್ಲಿ

ಇಲ್ಲಿಯವರೆಗೆ ಒಟ್ಟು 16 ಜಿಲ್ಲಾ ಮಟ್ಟದ ಜಾಗೃತ ಸಮಿತಿಗಳನ್ನು ಮತ್ತು 5140 ನ್ಯಾಯಬೆಲೆ ಅಂಗಡಿ ಮಟ್ಟದ ಜಾಗೃತ ಸಮಿತಿಯನ್ನು ರಚಿಸಲಾಗಿದೆ.

2) ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಧಾನ್ಯ/ ಸೀಮೆಎಣ್ಣೆಯನ್ನು ವಿತರಿಸುವಾಗ ಅರ್ಹ ಪಡಿತರ ಚೀಟಿದಾರರ ತಃಖ್ತೆಯನ್ನು ಪರಿಶೀಲಿಸಿ ದೃಢೀಕರಿಸಿ ಪಡಿತರ ಚೀಟಿದಾರರ ಸಹಿ ಪಡೆದು ಆಹಾರಧಾನ್ಯ ವಿತರಿಸಲು ಕ್ರಮವಹಿಸಿದೆ.

3) ಪ್ರತಿ ಸಗಟು ಮಾರಾಟ ಮಳಿಗೆ ವರ್ತಕರು ತಿಂಗಳ ಅಂತ್ಯದಲ್ಲಿ ನ್ಯಾಯಬೆಲೆ ಅಂಗಡಿ/ ಚಿಲ್ಲರೆ ಸೀಮೆಎಣ್ಣೆ ವಿತರಕರಿಗೆ ಆಹಾರಧಾನ್ಯ/ ಸೀಮೆಎಣ್ಣೆ ವಿತರಣೆಯನ್ನು ಪೂರ್ಣಗೊಳಿಸಲಿರುವುದರಿಂದ ಮುಂದಿನ ಮಾಹೆಯ 1ನೇ ತಾರೀಖಿನಂದೇ ಸಗಟು ಮಾರಾಟ ಮಳಿಗೆಯ ಅಂತಿಮ ದಾಸ್ತಾನನ್ನು ಪರಿಶೀಲಿಸಿ ದೃಢೀಕರಿಸುವುದು. ಎಲ್ಲಾ ನ್ಯಾಯಬೆಲೆ ಅಂಗಡಿ/ ಚಿಲ್ಲರೆ ಸೀಮೆಎಣ್ಣೆ ವಿತರಕರು ಪಡಿತರ ಚೀಟಿದಾರರಿಗೆ ಪ್ರತಿ ತಿಂಗಳ ಆಹಾರಧಾನ್ಯ /ಸೀಮೆಎಣ್ಣೆ ವಿತರಣೆಯ ನಂತರ ನ್ಯಾಯಬೆಲೆ ಅಂಗಡಿಗಳ ಅಂತಿಮ ದಾಸ್ತಾನಿನ ವಿವರಗಳನ್ನು ಪರಿಶೀಲಿಸಬೇಕು. ಇದಕ್ಕಾಗಿ ಪ್ರತೀ ಕಾರ್ಡುದಾರರಿಗೆ ವಿತರಿಸಲಾದ ಪಡಿತರ ವಿವರಗಳ ತಃಖ್ತೆ, ದಾಸ್ತಾನುವಹಿ ಹಾಗೂ ಬಿಲ್ ಪುಸ್ತಕಗಳನ್ನು ಪರಿಶೀಲಿಸಿ ದೃಢೀಕರಿಸಬೇಕು.

4) ಇಲಾಖೆಯ ವೈಬ್‌ಸೈಟ್‌ನಲ್ಲಿ ಎಲ್ಲ ಪಡಿತರ ಚೀಟಿಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರದರ್ಶಿಸಲಾಗಿದೆ. ಈ ಮಾಹಿತಿಯನ್ನು ಆಧರಿಸಿ ಸಾರ್ವಜನಿಕರು ಯಾವುದೇ ಪಡಿತರ ಚೀಟಿ ಬಗ್ಗೆ ತಮ್ಮ ಅಭಿಪ್ರಾಯವನ್ನು ದಾಖಲಿಸಬಹುದು. ಇದರ ಆಧಾರದ ಮೇರೆಗೆ ಅನರ್ಹ ಪಡಿತರ ಚೀಟಿ ಹೊಂದಿರುವ ಮಾಹಿತಿ ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುವುದು.

5) ಆಹಾರ ಧಾನ್ಯ ಮತ್ತು ಸೀಮೆಎಣ್ಣೆ ವಿತರಣೆಯಲ್ಲಿನ ಲೋಪದೋಷಗಳ ಬಗ್ಗೆ ಸಾರ್ವಜನಿಕರಿಂದ ಬರುವ ದೂರುಗಳನ್ನು ಸಕಾಲದಲ್ಲಿ

ಇತ್ಯರ್ಥಪಡಿಸುವ ಸಲುವಾಗಿ ಗ್ರಾಹಕರ ಸಹಾಯವಾಣಿ (1967 ಉಚಿತ ಕರೆ ಕೇಂದ್ರ) ಸ್ಥಾಪಿಸಲಾಗಿದೆ. ಆನ್‌ಲೈನ್ ಮೂಲಕವು ಸಹ ದೂರು ಸಲ್ಲಿಸಬಹುದು.

6) ಆಹಾರಧಾನ್ಯಗಳನ್ನು ಮತ್ತು ಸೀಮೆಎಣ್ಣೆಯನ್ನು ಪ್ರತಿ ಮಾಹೆ 1ನೇ ತಾರೀಖಿನಿಂದಲೇ ನ್ಯಾಯಬೆಲೆ ಅಂಗಡಿ/ ಚಿಲ್ಲರೆ ಸೀಮೆಎಣ್ಣೆ ವಿತರಕರಲ್ಲಿ ಪಡಿತರ ಚೀಟಿದಾರರ ಹಕ್ಕಿನ ಪಡಿತರ ಗ್ಯಾರಂಟಿಯಾಗಿ ದೊರೆಯುವಂತೆ ಪಡಿತರ ಖಾತರಿ ಮತ್ತು ಸೀಮೆಎಣ್ಣೆ ಖಾತರಿ ಯೋಜನೆ ಜಾರಿಗೊಳಿಸಲಾಗಿದೆ.

7) ಪ್ರತಿ ತಿಂಗಳ 7ನೇ ತಾರೀಖಿನಂದು ನ್ಯಾಯಬೆಲೆ ಅಂಗಡಿ ಹಂತದಲ್ಲಿ ಅನ್ನಭಾಗ್ಯ/ಆಹಾರ ಅದಾಲತ್ ಹಮ್ಮಿಕೊಳ್ಳಲಾಗುತ್ತಿದ್ದು, ಪಡಿತರ ಚೀಟಿದಾರರ ಅಹವಾಲು ಪರಿಶೀಲಿಸಿ ಅವರ ಕುಂದುಕೊರತೆ ಪರಿಹರಿಸಲಾಗುತ್ತಿದೆ.

8) ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಚೀಟಿವಾರು ವಿತರಿಸಲಾಗುವ ಆಹಾರಧಾನ್ಯ/ ಸೀಮೆಎಣ್ಣೆ ಹಂಚಿಕೆ ವಿವರದ ತಃಖ್ತೆಯನ್ನು ನೀಡಲಾಗುತ್ತಿದೆ. ಅದರಲ್ಲಿ ಪ್ರತಿ ಕಾರ್ಡ್‌ಗೆ ನೀಡಲಾಗುತ್ತಿರುವ ಹಂಚಿಕೆ ಪ್ರಮಾಣ, ದರದ ಮಾಹಿತಿ ಲಭ್ಯವಿದ್ದು, ಪಡಿತರ ಎತ್ತುವಳಿ ಮಾಡುವ ವೇಳೆ ಅದರಲ್ಲಿ ಎಲ್ಲಾ ಕಾರ್ಡುದಾರರು ಸಹಿ ಮಾಡುವುದರಿಂದ ಅವರಿಗೆ ನೀಡಲಾಗುವ ವಿತರಣಾ ಪ್ರಮಾಣ ಕಾರ್ಡುದಾರರಿಗೆ ತಿಳಿಯುತ್ತದೆ.